ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA - C.H.M. ಫೋನ್ : 114

ನೇ ವರ್ಷ 14ನೇ ಸಂಚಿಕೆ ಕೊಪ್ಪ 29-11-1989 ಬುಧವಾರ ಬೆಲೆ 30 ಪೈಸೆ

ಕಾಂಗ್ರೆಸಿನ ವಿಜೃಂಭಣೆಯ ವಿಜಯೋತ್ಸವ

ಕೊಪ್ಪ : ಶೃಂಗೇರಿ ಕ್ಷೇತ್ರವನ್ನು ಆರೂವರೆ ವರ್ಷಗಳ (2 ಚುನಾವಣೆಗಳ) ನಂತರ ಪುನಃ ಕಾಂಗ್ರೆಸ್‌ಗೆ ಗೆದ್ದುಕೊಟ್ಟ ಯು. ಕೆ. ಶಾಮಣ್ಣ ಅವರ ವಿಜಯೋತ್ಸವ ಮೆರವಣಿಗೆ ಕ್ಷೇತ್ರದಾದ್ಯಂತ ವಿಜೃಂಭಣೆಯಿಂದ ನಡೆಯಿತು.

ತೆರೆದ ಮೆಟಡೋರ್ ವಾಹನದಲ್ಲಿ ಶಾಮಣ್ಣ, ಜಿ ಪ. ಸದಸ್ಯರಾದ ಎಚ್. ಎಂ ಮಾಸ್ತಿ, ಸುಮಿತ್ರಮ್ಮ ಮತ್ತು ಬಿ. ಜಿ. ಚಿದಂಬರ್ ಹಾಗೂ ಕೊಪ್ಪ ತಾ। ಕಾಂಗ್ರೆಸ್ ಅಧ್ಯಕ್ಷ ವಿಜಯ ಅಜಿಲ ಅವರನ್ನೊಳಗೊಂಡ ಮೆರವಣಿಗೆಯಲ್ಲಿ ಕಾಂಗ್ರೆಸ್ ಅಭಿಮಾನಿಗಳು ಮತ್ತು ಕಾರ್ಯಕರ್ತರು ಬ್ಯಾಂಡ್ ವಾದ್ಯದೊಂದಿಗೆ ಬೀದಿಗಳಲ್ಲಿ ನರ್ತಿಸುತ್ತ, ಪಟಾಕಿ ಸಿಡಿಸುತ್ತ ಸಂಭ್ರಮ ಮೆರೆದರು. ಕಾರು, ಲಾರಿ ಮತ್ತು ಹತ್ತಾರು ರಿಕ್ಷಾಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಮೆರವಣಿಗೆ ಸುಮಾರು ಒಂದೂವರೆ ಗಂಟೆ ಕಾಲ ನಡೆಯಿತು.

ಬಾಳೆಹೊನ್ನೂರು, ಜಯಪುರ, ನ ರಾ. ಪುರ, ಹರಿಹರಪುರ, ಶೃಂಗೇರಿಗಳಲ್ಲಿ ವಿಜಯೋತ್ಸವ ಮೆರವಣಿಗೆ ನಡೆಯಿತು.

ಕೇಂದ್ರದಲ್ಲಿ ಕಾಂಗ್ರೆಸ್‌ಗೆ ಬಹುಮತ ನಷ್ಟ

1984ರ ಚುನಾವಣೆಯಲ್ಲಿ ಐದನೇ ನಾಲ್ಕಂಶದಷ್ಟು ಅಗಾಧ ಬಹುಮತ ಪಡೆದಿದ್ದ ಕಾಂಗ್ರೆಸ್ ಈ ಬಾರಿ ತನ್ನ ಮಿತ್ರ ಪಕ್ಷಗಳಾದ ಎಡಿಎಂಕೆ ಮತ್ತು ನ್ಯಾಶನಲ್ ಕಾನ್ಫರೆನ್ಸ್‌ಗಳನ್ನು ಸೇರಿಸಿಯೂ ಸರ್ಕಾರ ರಚಿಸಬಲ್ಲ (ಅರ್ಧಾಂಶ) ಬಹುಮತ ಗಳಿಸುವ ಸ್ಥಿತಿಯಲ್ಲಿಲ್ಲ.

ಲೋಕಸಭೆಯ 543 ಸ್ಥಾನಗಳ ಪೈಕಿ 525 ಸ್ಥಾನಗಳಿಗೆ ಮಾತ್ರ ಚುನಾವಣೆ ನಡೆದಿದ್ದು, ನ 28ರ ರಾತ್ರಿ 1 ಗಂಟೆ ವೇಳೆಗೆ ವಿವಿಧ ಪಕ್ಷಗಳ ಬಲ ಹೀಗಿತ್ತು:

ಘೋಷಿತ ಫಲಿತಾಂಶಗಳು 481, ಕಾಂಗ್ರೆಸ್ 189, ದಳ 113, ಬಿಜೆಪಿ 82, ಸಿಪಿಎಂ 32, ಸಿಪಿಐ 10, ಎಡಿಎಂಕೆ 11, ತೆಲುಗು ದೇಶಂ 2, ಅಕಾಲಿ ದಳ (ಮಾನ್) 6, ನ್ಯಾ। ಕಾನ್ಫರೆನ್ಸ್ 3, ಆರ್ ಎಸ್ ಪಿ 4 ಫಾರ್ವರ್ಡ್ ಬ್ಲಾಕ್ 3, ಕಾಂ. (ಎಸ್.) 1, ಬಹುಜನ ಸಮಾಜ ಪಕ್ಷ 3, ಇತರ 22. (45 ಸ್ಥಾನಗಳ ಫಲಿತಾಂಶ ಬಾಕಿ)

ಮುಂದೂಡಿಕೆ

ಈ ಸಂಚಿಕೆಯ 2ನೇ ಪುಟದಲ್ಲಿ ಪ್ರಕಟಿಸಿರುವ ನೈಸರ್ಗಿಕ ಕೃಷಿ ವಿಚಾರ ಸಂಕಿರಣವನ್ನು ಮುಂದೂಡಿದ್ದು, ದಿನಾಂಕವನ್ನು ಮುಂದೆ ಪ್ರಕಟಿಸಲಾಗುವುದೆಂದು ವ್ಯವಸ್ಥಾಪಕರು ತಿಳಿಸಿದ್ದಾರೆ.

ದಳ, ಜನತಾ ಹೀನಾಯ ಸೋಲು, ಬಿಜೆಪಿ ಚೇತರಿಕೆ, ಕಮ್ಯುನಿಸ್ಟರಿಗೆ ಸೊನ್ನೆ !

ಕರ್ನಾಟಕ ಮತ್ತೆ ಕಾಂಗ್ರೆಸ್ ಮಡಿಲಿಗೆ

ಉತ್ತರದಲ್ಲಿ 'ಭಾರ ಕುಸಿದು' ದಕ್ಷಿಣ ಭಾರತದಾದ್ಯಂತ ಬೀಸಿ ಬಂದ 'ಕಾಂಗ್ರೆಸ್ ಅಲೆ'ಯಲ್ಲಿ ಆಂಧ್ರ, ತಮಿಳುನಾಡು, ಕೇರಳಗಳಂತೆ ಕರ್ನಾಟಕವೂ ಕೊಚ್ಚಿ ಹೋಯಿತು !

ಕರ್ನಾಟಕದ 28 ಲೋಕಸಭಾ ಸ್ಥಾನಗಳ ಪೈಕಿ ಜನತಾ ದಳಕ್ಕೆ ಸಿಕ್ಕ 1 ಸ್ಥಾನದ ಹೊರತು ಮಿಕ್ಕ ಎಲ್ಲ 27 ಸ್ಥಾನಗಳನ್ನೂ ಕಾಂಗ್ರೆಸ್ ಗೆದ್ದರೆ, ರಾಜ್ಯ ವಿಧಾನ ಸಭೆಯಲ್ಲೂ ಸಹ ಮೂರನೆಯ ಎರಡಕ್ಕಿಂತ ಹೆಚ್ಚಿನ ಪ್ರಚಂಡ ಬಹುಮತ ಗಳಿಸಿದೆ.

ರಾಜ್ಯದ ಕಾಂಗ್ರೆಸ್ ವಿರೋಧಿ ಮತದಾರರೆಲ್ಲರ ತೀವ್ರ ಕೋಪಕ್ಕೆ ನೇರ ಗುರಿಯಾಗಿರುವ ದೇವೇಗೌಡ ತಮ್ಮ ಸ್ವ ಕ್ಷೇತ್ರವಾದ ಹೊಳೆನರಸೀಪುರ ಮತ್ತು ಕನಕಪುರ–ಈ ಎರಡೂ ಕಡೆ ನೆಲ ಕಚ್ಚಿದ್ದಾರೆ.

ಆದರೆ ಕರ್ನಾಟಕದ ಪತನಕ್ಕೆ ಮೂರು ವರ್ಷದ ಹಿಂದೆಯೇ ನಾಂದಿ ಹಾಡಿದ ರಾಮಕೃಷ್ಣ ಹೆಗಡೆ ಮತ್ತು ಅವರ ಭ್ರಷ್ಟ ಕೂಟದ ಆಳ್ವ, ಸಿಂಧ್ಯಾ, ಜಾಲಪ್ಪ, ಮುಂತಾದ ಕೆಲ ಪ್ರಮುಖರು ಆಯ್ಕೆಯಾಗಿದ್ದಾರೆ. ತೀರ್ಥಹಳ್ಳಿಯಿಂದ ದಳದ ಡಿ. ಬಿ ಚಂದ್ರೇಗೌಡ ಆಯ್ಕೆಯಾಗಿದ್ದಾರೆ.

ರಾಜ್ಯದ 224 ಸ್ಥಾನಗಳ ಪೈಕಿ 222 ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ವಿವಿಧ ಪಕ್ಷಗಳ ಬಲಾಬಲ ಹೀಗಿದೆ: ಕಾಂಗ್ರೆಸ್ 177, ದಳ 24, ಬಿಜೆಪಿ 4, ಎಂಇಎಸ್. 4, ಜನತಾ (ಜೆ ಪಿ.) 2, ರೈತ ಸಂಘ, 2 ಮುಸ್ಲಿಂ ಲೀಗ್ 1, ಎಡಿಎಂಕೆ 1, ಪಕ್ಷೇತರರು 7.

ಶಾಮಣ್ಣ ಜಯಭೇರಿ

ಶೃಂಗೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಎರಡನೇ ಬಾರಿಗೆ ಕಾಂಗ್ರೆಸ್‌ಯಿಂದ ಜನತಾ ದಳದ ಗೋವಿಂದ ಗೌಡರ ವಿರುದ್ಧ ಸ್ಪರ್ಧಿಸಿದ್ದ ಯು. ಕೆ ಶಾಮಣ್ಣ 13,000ಕ್ಕೂ ಹೆಚ್ಚು ಮತಗಳ ಭಾರೀ ಅಂತರದಿಂದ ಜಯಭೇರಿ ಬಾರಿಸಿದ್ದಾರೆ.



ಕ್ಷೇತ್ರದ ಒಟ್ಟು ಮತಗಳು	1,16,846
ಚಲಾವಣೆ ಆದುದು	83,215
ತಿರಸ್ಕೃತಗೊಂಡವು	3,843
ಯು ಕೆ ಶಾಮಣ್ಣ	36,912
ಗೋವಿಂದ ಗೌಡ	23,122
ಟಿ. ಪ್ರಕಾಶ್	8,731
ಕೆ ವಿ ರಾಮಪ್ಪಯ್ಯ	7,094
ಎಂ. ಎಲ್. ಸೇವಿಯರ್	6.564
ಟಿ. ನಾಗೇಶ್	248
ಗೋವರ್ಧನ	188
ಗೋಪಾಲ ಭಂಡಾರಿ	136
ಪಿ. ಸಿ. ಜೋನ್	140
ಪದ್ಮನಾಭನ್	80

ಜನತಾ ಪಕ್ಷದ ತಲವಾನೆ ಪ್ರಕಾಶ್, ಪಕ್ಷೇತರ ಅಭ್ಯರ್ಥಿ ಕೆ. ವಿ. ರಾಮಪ್ಪಯ್ಯ ಮತ್ತು ಸಿಪಿಐ ಅಭ್ಯರ್ಥಿ ಎಂ. ಎಲ್. ಸೇವಿಯರ್ ಕ್ರಮವಾಗಿ 3. 4 ಮತ್ತು 5ನೇ ಸ್ಥಾನ ಗಳಿಸಿದ್ದು, ಎಲ್ಲರೂ ಠೇವಣಿ ಕಳೆದುಕೊಂಡಿದ್ದಾರೆ ಇನ್ನಿತರ ಐವರು ಪಕ್ಷೇತರರೂ ಠೇವಣಿ ಕಳೆದುಕೊಂಡಿದ್ದಾರೆ.

ಮತದಾನದ ವಿವರಗಳು ಹೀಗಿವೆ :

ಲೋಕಸಭೆಗೆ ಪುಟ್ಟೇಗೌಡ : ಸುಂದರೇಶ್‌ಗೆ ಸೋಲಿನಲ್ಲೂ ಗೌರವ

ಚಿಕ್ಕಮಗಳೂರು : ಭಾರತ ಕಮ್ಯುನಿಸ್ಟ್ ಪಕ್ಷದಿಂದ ಈ ಬಾರಿ ಲೋಕಸಭೆಗೆ ಸ್ಪರ್ಧಿಸಿದ್ದ ಬಿ. ಕೆ. ಸುಂದರೇಶ್ ಅತ್ಯಂತ ಗೌರವಾರ್ಹ ರೀತಿಯಲ್ಲಿ ಸೋಲನ್ನಪ್ಪಿದ್ದಾರೆ ಕಾಂಗ್ರೆಸ್‌ನ ಡಿ ಎಂ. ಪುಟ್ಟೇಗೌಡ ಜಯ ಗಳಿಸಿದ್ದ, ಸುಂದರೇಶ್ ಜನತಾ ದಳದ ಅಭ್ಯರ್ಥಿಯನ್ನೂ ಹಿಂದೆ ಹಾಕಿ 2ನೇ ಸ್ಥಾನ ಪಡೆದಿದ್ದಾರೆ.

1984ರ ಡಿಸೆಂಬರ್‌ನಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಆಗಿನ ಜನತಾ ಪಕ್ಷ ಮತ್ತು ಸಿಪಿಎಂ ಬೆಂಬಲದೊಂದಿಗೆ ಸ್ಪರ್ಧಿಸಿದ್ದ ಸುಂದರೇಶ್ 1,40 060 ಮತಗಳಿಂದ ಕಾಂಗ್ರೆಸ್‌ನ ತಾರಾದೇವಿ ಅವರಿಗೆ ಸೋತಿದ್ದರು ಆಗ ಒಟ್ಟು 6,77,600 ಮತಗಳಿದ್ದು, ಸುಮಾರು 4,15,000 ಮತ ಚಲಾವಣೆಯಾಗಿತ್ತು.

ಈ ಬಾರಿ 9 40,328 ಮತಗಳ ಪೈಕಿ 6,70,328 ಮತಗಳು ಚಲಾವಣೆಯಾಗಿ, 32 698ರಷ್ಟು ಅಗಾಧ ಪ್ರಮಾಣದಲ್ಲಿ ತಿರಸ್ಕೃತ, 6.37,630 ಕ್ರಮಬದ್ಧ ಮತಗಳಿದ್ದವು ಈ ಪೈಕಿ ಡಿ ಎಂ ಪಿಗೆ 3,03,195, ಸುಂದರೇಶ್ ಗೆ 1,41,838 ಜನತಾದಳದ ಅನ್ವರ್ ಪಾಷಾ ಗೆ 1,32,267 ಜನತಾ ಪಕ್ಷದ ರತ್ನಮ್ಮ ಮಲ್ಲೇಗೌಡರಿಗೆ 52,066 ಮತಗಳು ಲಭಿಸಿವೆ. ಮೂವರು ಪಕ್ಷೇತರರು 8264 ಮತ ಪಡೆದಿದ್ದಾರೆ.

ಕಳೆದ ಬಾರಿ ಸುಂದರೇಶ್ ವಿರೋಧ ಪಕ್ಷಗಳ ಏಕೈಕ ಅಭ್ಯರ್ಥಿಯಾಗಿದ್ದರು, ಈ ಬಾರಿ ದಳ, ಜನತಾ ಪ್ರತ್ಯೇಕ ಅಭ್ಯರ್ಥಿಗಳನ್ನು ನಿಲ್ಲಿಸಿದ್ದೂ ಸಹ, ದಲಿತ ಸಂಘರ್ಷ ಸಮಿತಿಯ ಬೆಂಬಲ ಮಾತ್ರ ಪಡೆದಿದ್ದ (ಸಿಪಿಎಂ ಬೆಂಬಲ ಕೂಡ ದಳಕ್ಕೆ) ಸುಂದರೇಶ್ 2ನೇ ಸ್ಥಾನ ಪಡೆದಿರುವುದು ಒಂದು ಗಮನಾರ್ಹ ಸಾಧನೆಯೇ ಸರಿ.

ಅದರಲ್ಲೂ, ಚಿಕ್ಕಮಗಳೂರು ವಿಧಾನ ಸಭಾ ಕ್ಷೇತ್ರದಲ್ಲಿ ಸುಂದರೇಶ್ ಪುಟ್ಟೇಗೌಡರಿಗಿಂತಲೂ 3384 ಮತಗಳನ್ನು ಹೆಚ್ಚಾಗಿ ಪಡೆದುದಲ್ಲದೆ, ಜಿಲ್ಲೆಯ ಉಳಿದ ಐದು ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಒಳ್ಳೆಯ ಪೈಪೋಟಿ ನೀಡಿದರು. ಕಾರ್ಕಳ ಮತ್ತು [illegible] ಕ್ಷೇತ್ರಗಳಲ್ಲಿ ಮಾತ್ರ ಅನ್ವರ್ ಪಾಷಾ 2ನೇ ಸ್ಥಾನ ಗಳಿಸಿದರು.

ಮತಗಟ್ಟೆವಾರು ವಿವರ ಪ್ರಕಟಣೆ ಇಲ್ಲ

ಓದುಗರಲ್ಲಿ,

ವಿಧಾನ ಸಭೆ ಮತ್ತು ಲೋಕ ಸಭೆಯ ಮತಗಟ್ಟೆವಾರು ಮತಗಳ ವಿವರ ಪ್ರಕಟಿಸಬೇಕೆಂದು ನಮ್ಮ 26-11-89ರ ಪತ್ರಿಕೆಯನ್ನು ತಡ ಮಾಡಿದ್ದೆವು ಆದರೆ ಕಳೆದ 2-3 ದಿನಗಳಿಂದ ಹಲವಾರು ಮಂದಿ ವಿಚಾರವಂತ ಓದುಗರು ಮತ್ತು ಕೆಲ ಮಂದಿ ರಾಜಕೀಯ ಪಕ್ಷಗಳ ಕಾರ್ಯಕರ್ತರು ಹೀಗೆ ಮತಗಟ್ಟೆವಾರು ವಿವರ ಪ್ರಕಟಗೊಳ್ಳುವುದು ಬಹಳ ಅಪಾಯಕರವೆಂದು ಆತಂಕ ವ್ಯಕ್ತಪಡಿಸಿದ್ದಾರೆ.

ಅಲ್ಲದೆ, ಹೀಗೆ ಮತಗಟ್ಟೆವಾರು ವಿವರಗಳು ಬಹಿರಂಗಗೊಳ್ಳುವುದು ಗುಪ್ತ ಮತದಾನ ತತ್ವಕ್ಕೇ ವಿರುದ್ಧವೆಂಬ ಸಾರ್ವಜನಿಕ ಅಭಿಪ್ರಾಯವನ್ನು ನಾವೂ ಅನುಮೋದಿಸುವುದರಿಂದ. ಮತಗಟ್ಟೆವಾರು ವಿವರಗಳನ್ನು ಪ್ರಕಟಿಸದಿರಲು ನಿರ್ಧರಿಸಿದ್ದೇವೆ.

ಓದುಗರೂ ಇದನ್ನು ಮೆಚ್ಚುತ್ತಾರೆಂದು ನಂಬಿದ್ದೇನೆ.

—ಸಂಪಾದಕ.

ಕೊಪ್ಪಕ್ಕೆ ಎಲೆಕ್ಟ್ರಾನಿಕ್ ದೂರವಾಣಿ ಕೇಂದ್ರ: ಹಿರಿಯ ಅಧಿಕಾರಿಗಳ ಭರವಸೆ

ಕೊಪ್ಪ : ಇಲ್ಲಿನ ದೂರವಾಣಿ ಕೇಂದ್ರವನ್ನು 1991ರ ಕೊನೆಯೊಳಗಾಗಿ ಸ್ವಯಂಚಾಲಿತ ಎಲೆಕ್ಟ್ರಾನಿಕ್ ಕೇಂದ್ರವಾಗಿ ಮಾರ್ಪಡಿಸಿ, ರಾಷ್ಟ್ರೀಯ ಎಸ್.ಟಿ.ಡಿ ಜಾಲಕ್ಕೆ ಮೈಕ್ರೋವೇವ್ ಮೂಲಕ ಸಂಪರ್ಕಿಸಲಾಗುವುದೆಂದು ಕರ್ನಾಟಕ ಟೆಲಿಕಾಂ ವಲಯದ ಚೀಫ್ ಜನರಲ್ ಮ್ಯಾನೇಜರ್ ವೆಂಕಟರಾವ್ ಮತ್ತು ಯೋಜನಾ ಮ್ಯಾನೇಜರ್ ವಿ. ಪಿ. ರಾಮಕೃಷ್ಣ ಭರವಸೆಯಿತ್ತಿದ್ದಾರೆ.

ನ. 25ರಂದು ಇಲ್ಲಿಗೆ ಭೇಟಿ ಕೊಟ್ಟಿದ್ದ ಈ ಉನ್ನತ ಅಧಿಕಾರಿಗಳನ್ನು ಲಯನ್ಸ್ ಮತ್ತು ರೋಟರಿ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಪ್ರಮುಖ ಫೋನ್ ಬಳಕೆದಾರರನ್ನೊಳಗೊಂಡ ನಿಯೋಗ ಭೇಟಿ ಮಾಡಿ ಮೇಲ್ಕಂಡ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರ ಸಲ್ಲಿಸಿದಾಗ ಈ ಭರವಸೆ ದೊರೆತಿದೆ. ಅಲ್ಲದೆ, ಇದೇ ಅವಧಿಯೊಳಗೆ ದೂರವಾಣಿ ಕೇಂದ್ರಕ್ಕೆ ವ್ಯವಸ್ಥಿತವಾದ ಸ್ವಂತ ಇಲಾಖಾ ಕಟ್ಟಡ ನಿರ್ಮಿಸುವ ಭರವಸೆಯನ್ನೂ ಈ ಅಧಿಕಾರಿಗಳು ನೀಡಿದ್ದಾರೆ.

ಈ ಕೇಂದ್ರ ಈಗಲೂ ಕೂಡ 'ನಂಬರ್ ಪ್ಲೇಸ್' ಕೇಂದ್ರವಾಗಿಯೇ ಇರುವುದನ್ನು ಇಲ್ಲಿ ಸ್ಮರಿಸಬಹುದು.

ದತ್ತಿ ಉಪನ್ಯಾಸ

ಹರಿಹರಪುರ : ನ. 11ರಂದು ಇಲ್ಲಿನ ಕಿರಿಯ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಕಾಶಿ ವಿಶ್ವನಾಥ ಶ್ರೇಷ್ಠಿಯವರ ದತ್ತಿ ನಿಧಿ ಮತ್ತು ಅವರ ನಾಟಕಗಳ ಬಗೆಗೆ ದ. ರಾಜಣ್ಣ ಅವರು ಉಪನ್ಯಾಸ ನೀಡಿದರು.

ವೃತ್ತಿ ಮಾರ್ಗದರ್ಶನ

ಶಿವಮೊಗ್ಗ ಕ್ಷೇತ್ರ ಪ್ರಚಾರಾಧಿಕಾರಿಯವರು ಎಸ್. ಎಸ್. ಎಲ್. ಸಿ. ಮತ್ತು ಪಿ.ಯು.ಸಿ. ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಾಯಿಸುವ ಬಗೆಗೆ ಉಪನ್ಯಾಸವೊಂದನ್ನು ಜನವರಿಯಲ್ಲಿ ನೀಡಲಿದ್ದಾರೆ.

(ವರದಿ : ಕೆ. ಎಸ್. ಅನಿಲ್‌ಕುಮಾರ್)

'ಮುಂಜಾವು' ಚಂದಾ ಹಣ ಕಳಿಸಿ ಸಹಕರಿಸಿ
ವಾರ್ಷಿಕ ಚಂದಾ : ರೂ. 35-00

ಚಿಕ್ಕಮಗಳೂರು ಲೋಕಸಭೆ ವ್ಯಾಪ್ತಿಯ ಮತದಾನದ ವಿವರ :

ಕ್ಷೇತ್ರದ ಹೆಸರು	ಒಟ್ಟು ಮತಗಳು	ಚಲಾವಣೆ ಆದವು	ಪುರುಷರು	ಮಹಿಳೆಯರು	ಶೇಕಡಾವಾರು
ಶೃಂಗೇರಿ	116846	87061	45449	41612	74.05
ಮೂಡಿಗೆರೆ	117142	78506	42472	36034	67.01
ಚಿಕ್ಕಮಗಳೂರು	120712	81446	44233	37233	67.48
ಬೀರೂರು	108917	72456	39160	33297	66.52
ಕಡೂರು	111670	84493	45260	39233	75.66
ಬೆಳ್ತಂಗಡಿ	128283	95073	48934	46139	74.01
ತರೀಕೆರೆ	127713	89397	47761	41636	69.99
ಕಾರ್ಕಳ	109045	74908	34639	40269	68.69
ಒಟ್ಟು	940328	663361	347908	315453	70.54

ನೆಹರು ಜನ್ಮ ಶತಾಬ್ದಿ ಮತ್ತು ಮಕ್ಕಳ ದಿನಾಚರಣೆ

ಉತ್ತಮೇಶ್ವರ

ಇಲ್ಲಿನ ಸ್ವಯಂ ಸೇವಾ ಕೇಂದ್ರ ಮತ್ತು ದುರ್ಗಾ ಪರಮೇಶ್ವರಿ ಮಹಿಳಾ ಮಂಡಳಿಗಳ ಭಾಗಿತ್ವದಲ್ಲಿ ನಡೆದ ಮಕ್ಕಳ ದಿನಾಚರಣೆ ಅಂಗವಾಗಿ ಮಕ್ಕಳಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳು, ಜ್ಞಾಪಕ ಶಕ್ತಿ ಪರೀಕ್ಷೆ, ಸ್ಥಳದಲ್ಲಿಯೇ ಚಿತ್ರ ಬಿಡಿಸುವಿಕೆ ಮುಂತಾದ ಸ್ಪರ್ಧೆಗಳು ನಡೆದವು.

ಲಯನ್ಸ್ ಕ್ಲಬ್, ಕೊಪ್ಪ

ಮಕ್ಕಳ ದಿನಾಚರಣೆ ಮತ್ತು ನೆಹರೂ ಜನ್ಮ ಶತಾಬ್ದಿ ಅಂಗವಾಗಿ ಮಕ್ಕಳ ಆರೋಗ್ಯ ತಪಾಸಣೆ ಮತ್ತು ಆರೋಗ್ಯವಂತ ಮಕ್ಕಳ ಸ್ಪರ್ಧೆಯನ್ನೂ, ಶಾಲಾ ಮಕ್ಕಳಿಗಾಗಿ ನೆಹರೂ ಬಾಲ್ಯ ಕುರಿತು ಪ್ರಬಂಧ ಸ್ಪರ್ಧೆ ಹಾಗೂ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆಗಳನ್ನೂ ಕೊಪ್ಪ ಲಯನ್ಸ್ ಮತ್ತು ಲಯನ್ ಲೇಡೀಸ್ ಏರ್ಪಡಿಸಿದ್ದರು. ವಿಜೇತ ಮಕ್ಕಳಿಗೆ ಡಾ|| ವಿಭಾ ಹೇಮಂತ್ ಬಹುಮಾನಗಳನ್ನು ವಿತರಿಸಿದರು.

ಚಿಣ್ಣರೇ ನಿರ್ವಹಿಸಿದ ಮಕ್ಕಳ ದಿನಾಚರಣೆ

ಜಯಪುರ : ಈ ಬಾರಿ ಇಲ್ಲಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಎಳೆಯರೆಲ್ಲರೂ ಸೇರಿ ಮಕ್ಕಳ ದಿನಾಚರಣೆಯನ್ನು ವರ್ಣರಂಜಿತವಾಗಿ ಆಚರಿಸಿದರು.

ಪ್ರೌಢಶಾಲಾ ವಿದ್ಯಾರ್ಥಿ ಎಲ್. ನಾಗೇಶ್ ಅಧ್ಯಕ್ಷತೆ ವಹಿಸಿದ್ದು ಪ್ರೌಢಶಾಲೆಯ ಜಿ. ಎಂ. ಗಾಯತ್ರಿ ಮತ್ತು ಹಿ. ಪ್ರಾ. ಶಾಲೆಯ ಪ್ರಶಾಂತ್ ಮುಖ್ಯ ಅತಿಥಿಗಳಾಗಿದ್ದರು. ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದು, ಬಹುಮಾನಗಳನ್ನು ವಿತರಿಸಲಾಯಿತು.

ಪ್ರೌಢಶಾಲೆ ಮತ್ತು ಹಿ. ಪ್ರಾ. ಶಾಲೆಗಳ ಮುಖ್ಯೋಪಾಧ್ಯಾಯರು ಮತ್ತು ಅಧ್ಯಾಪಕ ವೃಂದ ಆಹ್ವಾನಿತರಾಗಿದ್ದರು. ಕೆ. ಎಲ್ ಮಹೇಶ್ ಸ್ವಾಗತಿಸಿ, ನಾಗೇಂದ್ರ ವಂದಿಸಿದರು (ವರದಿ: ಕಂ ನ ಶೇಷಗಿರಿ.)

ಕೊಪ್ಪ ಜೂನಿಯರ್ ಛೇಂಬರ್

ನ 14 ರಂದು ಕೊಪ್ಪ ಜೇಸಿ ಆಶ್ರಯದಲ್ಲಿ ನಡೆದ ರಕ್ತ ವರ್ಗೀಕರಣ ಶಿಬಿರದಲ್ಲಿ 170 ಜನ ಭಾಗವಹಿಸಿದ್ದರು. ಆಯುರ್ವೇದ ಕಾಲೇಜು ವಿದ್ಯಾರ್ಥಿಗಳು ಹಾಗೂ ಲ್ಯಾಬೋರೇಟರಿ ತಂತ್ರಜ್ಞರಾದ ಸರ್ಕಾರಿ ಆಸ್ಪತ್ರೆಯ ಶೇಷಾದ್ರಿ, ಕೊಡಿಗೆಹಿತ್ಲು ಆಸ್ಪತ್ರೆಯ ಪ್ರಕಾಶಮೂರ್ತಿ ಮತ್ತು ಇ. ಎಂ. ಎಸ್. ಲ್ಯಾಬೊರೇಟರಿಯ ಶ್ರೀಮತಿ ಮೇರಿ ಅಬ್ರಹಾಂ ಇವರುಗಳು ಶಿಬಿರದ ಯಶಸ್ಸಿಗೆ ಪೂರ್ಣ ನೆರವು ನೀಡಿದರು. ಇದಲ್ಲದೆ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಗೆ ರಕ್ತ ಬೇಕಾದಲ್ಲಿ ರಕ್ತ ದಾನ ಮಾಡಲು ಸಿದ್ಧರಿರುವ 120 ಜನ ತಮ್ಮ ಹೆಸರುಗಳನ್ನು ನೊಂದಾಯಿಸಿದರು

ಶಾಲಾ ಮಕ್ಕಳಿಗಾಗಿ ಛದ್ಮವೇಷ ಸ್ಪರ್ಧೆಯನ್ನೂ ನಡೆಸಲಾಯಿತು.

ಕೊಪ್ಪ

ಇಲ್ಲಿನ ರೋಟರ್‍ಯಾಕ್ಟ್ ಕ್ಲಬ್ ವತಿಯಿಂದ ಮಕ್ಕಳ ದಿನಾಚರಣೆ ಮತ್ತು ನೆಹರು ಶತಮಾನೋತ್ಸವದ ಅಂಗವಾಗಿ ನ. 14 ರಂದು ಬೆಳಗ್ಗೆ "ಆರೋಗ್ಯಕ್ಕಾಗಿ ಓಟ" ಮತ್ತು "ಜಾಗಿಂಗ್ ಕ್ಲಬ್" ಉದ್ಘಾಟನೆಯನ್ನು ಕೊಪ್ಪ ತಹಶೀಲ್ದಾರ್ ಜಿ. ಎಸ್. ನಾಯಕ್ ನೆರವೇರಿಸಿದರು. ವಿವಿಧ ಶಾಲೆಗಳ ಮಕ್ಕಳು ಹಾಗೂ ಸಾರ್ವಜನಿಕರು ಪುರಸಭೆ ಕ್ರೀಡಾಂಗಣದವರೆಗೆ ಓಟದಲ್ಲಿ ಪಾಲ್ಗೊಂಡರು. ನಂತರ ಮಕ್ಕಳಿಗಾಗಿ ಕ್ರೀಡಾ ಸ್ಪರ್ಧೆಗಳು ನಡೆದವು.

ಸಂಜೆ ಮಕ್ಕಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತಹಶೀಲ್ದಾರ್‌ರವರು ಬಹುಮಾನ ವಿತರಿಸಿದರು. ಕೊಪ್ಪ ರೋಟರಿ ಕ್ಲಬ್ ಅಧ್ಯಕ್ಷ ಜಿ. ಸಿ. ಗೋಪಾಲಕೃಷ್ಣ ಮುಖ್ಯ ಅತಿಥಿಗಳಾಗಿದ್ದರು. ರೋಟರ್‍ಯಾಕ್ಟ್‌ನ ಉಪಾಧ್ಯಕ್ಷ ನರಸಿಂಹಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿಯಲ್ಲಿ 9 ನೇ ಸ್ಥಾನ ಪಡೆದ ಕೊಪ್ಪದ ಹಾಲೇಶ್ ಇವರನ್ನು ಸನ್ಮಾನಿಸಲಾಯಿತು

"ನೈಸರ್ಗಿಕ ಕೃಷಿ" ವಿಚಾರ ಸಂಕಿರಣ

ಕೊಪ್ಪ : ಇಲ್ಲಿನ ಸಿಂಡಿಕೇಟ್ ಬ್ಯಾಂಕ್ ಮತ್ತು ಕೃಷಿ ವಿಚಾರ ವಿನಿಮಯ ಕೇಂದ್ರದ ಆಶ್ರಯದಲ್ಲಿ, ಧಾರವಾಡದ ಗ್ರಾಮೀಣ ಅಭಿವೃದ್ಧಿ ಮತ್ತು ಸ್ವ ಉದ್ಯೋಗ ತರಬೇತಿ ಸಂಸ್ಥೆಯ ಸಹಯೋಗದೊಂದಿಗೆ, 'ನೈಸರ್ಗಿಕ ಕೃಷಿ' ವಿಧಾನದಲ್ಲಿ 12 ವರ್ಷಗಳ ಅನುಭವಿಯಾದ ಪ್ರದೀಪ್ ತಪಸ್ ಇವರಿಂದ ನೈಸರ್ಗಿಕ ಕೃಷಿ ಕುರಿತು ಕನ್ನಡದಲ್ಲಿ ವಿಚಾರ ಸಂಕಿರಣ ಮತ್ತು ಸ್ಲೈಡ್ ಪ್ರದರ್ಶನ ಡಿಸೆಂಬರ್ 5ರ ಮಂಗಳವಾರ ಹಡ್ಲುಕೊಡಿಗೆ ಜಮೀನಿನಲ್ಲಿ ಏರ್ಪಾಡಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೃ. ವಿ. ಕೇಂದ್ರದ ಕಾರ್ಯದರ್ಶಿ ಬಿ ಎಸ್. ಶ್ರೀನಿವಾಸ್ ಅಥವಾ ಸಿಂಡಿಕೇಟ್ ಬ್ಯಾಂಕ್‌ನ ಗ್ರಾ. ಅ. ಅಧಿಕಾರಿ ಶ್ರೀಕಾಂತ್ ಶೆಣೈ ಇವರನ್ನು ಸಂಪರ್ಕಿಸಬಹುದು.

ಬಿತ್ತನೆಗಾಗಿ ಭತ್ತದ ಬೀಜ ಆರಿಸುವ ಕ್ರಮ

ಚಿಕ್ಕಮಗಳೂರು : ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಭತ್ತದ ಬೆಳೆಯು ಕಾಳು ತುಂಬುವ ಹಂತದಿಂದ ಕಟಾವಿನ ಹಂತದಲ್ಲಿರುತ್ತದೆ. ಬಿತ್ತನೆ ಬೀಜ ಆರಿಸಲು ಇದು ಸಕಾಲವಾಗಿದ್ದು ರೈತರು ತಮಗೆ ಬೇಕಾದ ಭತ್ತದ ತಳಿಯ ಬಿತ್ತನೆ ಬೀಜಕ್ಕಾಗಿ ಬೆಳೆ ಇರುವ ತಾಕುಗಳಲ್ಲಿ ಉತ್ತಮವಾಗಿರುವ ಒಂದು ತಾಕು ಆಯ್ದುಕೊಂಡು, ಅದರಲ್ಲಿ ಇತರೆ ಜಾತಿಯ ತಳಿಗಳ ತೆನೆಗಳನ್ನು ಆರಿಸಿ ತೆಗೆಯಬೇಕು. ಈ ರೀತಿ ಆರಿಸುವಾಗ ಹೆಚ್ಚಿನಂಶ ರೈತರು ಬೇಕಾದ ತಳಿಗಿಂತ ಹೆಚ್ಚಿನ ಎತ್ತರದಲ್ಲಿ ಸುಲಭವಾಗಿ ಕಾಣುವ ಬರುವ ಅನ್ಯ ಜಾತಿಯ ತಳಿಯ ತೆನೆಗಳನ್ನು ತೆಗೆಯುವುದು ಸಾಮಾನ್ಯವಾಗಿರುತ್ತದೆ. ಇದರ ಜೊತೆಗೆ ಬೇಕಾದ ತಳಿಯಷ್ಟೇ ಅಥವಾ ಅದಕ್ಕಿಂತ ಕಡಿಮೆ ಎತ್ತರ ಬೆಳೆದಿರುವ ಅನ್ಯ ತಳಿಗಳ ತೆನೆಗಳನ್ನೂ ಗಮನಿಸಿ ತೆಗೆಯುವುದು ಮುಖ್ಯ.

ಈ ರೀತಿ ಮಾಡಿದಾಗ್ಯೂ ಕೂಡ ನೂರಕ್ಕೆ ನೂರರಷ್ಟು ಪರಿಶುದ್ಧ ತಳಿಯ ಬೀಜ ಆರಿಸುವುದು ಕಷ್ಟ. ಇದಕ್ಕೆ ಬದಲಾಗಿ **ಕಟಾವಿನ ವೇಳೆಯಲ್ಲಿ, ಬೇಕಾದ ಭತ್ತದ ತಳಿಯ ಸದೃಢವಾದ ತೆನೆಗಳನ್ನೇ ಆರಿಸಿ ಕುಯ್ದು ಬೀಜ ಮಾಡಿಕೊಳ್ಳುವುದೂ ಒಂದು ಉತ್ತಮ ಪದ್ಧತಿಯಾಗಿದೆ** ಆದರೆ ಈ ಪದ್ಧತಿಯಲ್ಲಿ ಹೆಚ್ಚು ಪ್ರಮಾಣದ ಬೀಜ ಆರಿಸಿಕೊಳ್ಳಲು ಸಾಧ್ಯವಿಲ್ಲ. ಆದರೂ ಈ ರೀತಿ ಮಾಡುವುದರಿಂದ ರೈತರು ಬೇಕಾದ ತಳಿಯ ಬಿತ್ತನೆ ಬೀಜಕ್ಕಾಗಿ ಪರದಾಡುವುದು ತಪ್ಪುತ್ತದೆ ಅಲ್ಲದೆ ಉತ್ತಮ ಬೀಜವನ್ನು ತಾವೇ ಮಾಡಿಕೊಂಡಂತಾಗುತ್ತದೆ ಎಂದು ಪ್ರಧಾನ ಕೃಷಿ ಅಧಿಕಾರಿ ತಿಳಿಸಿದ್ದಾರೆ.

ಶ್ರಮದಾನ

ಉತ್ತಮೇಶ್ವರ: ಇಲ್ಲಿನ ಸುತ್ತಮುತ್ತಲ ಕೃಷಿ ಕಾರ್ಮಿಕರು ಇತ್ತೀಚೆಗೆ ತಾವೇ ರಚಿಸಿಕೊಂಡಿರುವ ಶ್ರಮಿಕ ಸಂಘದ ವತಿಯಿಂದ, ...ಯ ಸ್ಪೋರ್ಟ್ಸ್ ಕ್ಲಬ್‌ನವರ ಸಹ...ದೊಂದಿಗೆ ಹಿರಿಯ ಪ್ರಾಥಮಿಕ ಶಾಲೆ ...ಲಾವನದ ಬೇಲಿಯನ್ನು ಶ್ರಮದಾನದ ...ದ ನಿರ್ಮಿಸಿಕೊಟ್ಟಿದ್ದಾರೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀಪಾವಳಿಗೆ ಅಚ್ಚುಕೂಟ, ಕೊಪ್ಪ.